ಮಾತನಾಡುವುದಿಲ್ಲ... ಆದರೂ ಎಲ್ಲವನ್ನೂ ಹೇಳುತ್ತಾಳೆ... ಬಹಳ ವಿಚಿತ್ರವಾಗಿದೆ. ನಾನು ನಿಧಾನವಾಗಿ ನಿಮಗೆ ಅದರ ಕಥೆಯನ್ನು ಹೇಳುತ್ತೇನೆ. ಆದರೆ... ಮುಂದಿನ ನಿಲ್ದಾಣದಲ್ಲಿ ನನಗೆ ಸ್ವಲ್ಪ ಕೆಲಸವಿದೆ. ಒಬ್ಬರನ್ನು ಭೇಟಿಯಾಗಬೇಕಾಗಿದೆ...''

ನಾನು ಸ್ವಲ್ಪ 'ಧೈರ್ಯ ಮಾಡಿ' ಆತನನ್ನು ಪ್ರಶ್ನಿಸಿದೆ, ''ನೀವು ಎಲ್ಲಿಯವರೆಗೆ ಪ್ರಯಾಣಿಸಲಿದ್ದೀರಿ?''

ಆತ ಉತ್ತರಿಸಿದ, ''ನಾನು ಹೋಗಬೇಕಾಗಿದ್ದುದು ಕೊಡೆರ್ಮಾಕ್ಕೆ. ಆದರೆ ನೀವು ಸಿಕ್ಕಿದ್ದೀರಲ್ಲ... ಪಾಟ್ನಾವರೆಗೂ ನಿಮ್ಮ ಜೊತೆಯಲ್ಲಿ ಬಂದುಬಿಡುತ್ತೇನೆ. ಇಂತಹ ಅದೃಷ್ಟ ನನ್ನ ಪಾಲಿಗೆ ಪದೇ ಪದೇ ಒಲಿಯುತ್ತದೆಯೇನು? ಇದನ್ನು ನಾನು ನದಿ ಮತ್ತು ದೋಣಿಯ ಸಂಬಂಧ ಎಂದು ಭಾವಿಸುತ್ತೇನೆ. ನಿಮ್ಮೊಂದಿಗೆ ಪ್ರಯಾಣಿಸುವುದು ನನ್ನ ಭಾಗ್ಯ...''

ಮಾತನ್ನು ಅರ್ಧದಲ್ಲಿಯೇ ನಿಲ್ಲಿಸಿದ ಆತ ಮೌಲ್ವಿ ಸಾಹೇಬರ ಸಮಸ್ಯೆಯೊಂದನ್ನು ದೂರ ಮಾಡುವುದಕ್ಕೆ ಮುಂದಾದ. ನಾವು ಪ್ರಯಾಣಿಸುತ್ತಿದ್ದ ರೈಲು ಹಜಾರಿಬಾಗ್‌ಗೆ ಹೋಗುತ್ತದೆಯೋ ಇಲ್ಲವೋ ಎನ್ನುವುದು ಮೌಲ್ವಿ ಸಾಹೇಬರ ಸಮಸ್ಯೆಯಾಗಿತ್ತು.

''ಇಲ್ಲ... ಇದು ಹಜಾರಿಬಾಗ್ ಹೋಗುವುದಿಲ್ಲ. ನೀವು ಹಜಾರಿಬಾಗ್ ಗೇಟ್ ನಿಲ್ದಾಣದಲ್ಲಿಯೇ ಇಳಿದುಕೊಳ್ಳಬೇಕು.'' ಅಷ್ಟು ಹೇಳಿದ ಆತ ಅತ್ಯಂತ ಚತುರತೆಯಿಂದ ಅಲ್ಲಿದ್ದ ಇತರ ಪ್ರಯಾಣಿಕರು ಎಲ್ಲಿಂದ ಬಂದಿದ್ದಾರೆ ಮತ್ತು ಎಲ್ಲಿಗೆ ಹೋಗುತ್ತಿದ್ದಾರೆ ಎನ್ನುವ ವಿಷಯವನ್ನು ತಿಳಿದುಕೊಂಡ. ನಂತರ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಸೂಚನೆಯನ್ನು ನೀಡುವ ಧ್ವನಿವರ್ಧಕದ ರೀತಿಯಲ್ಲಿ ಜೋರಾದ ಧ್ವನಿಯಲ್ಲಿ ಹೇಳತೊಡಗಿದ.

''ಮಾಂಗೇರ್‌ಗೆ ಹೋಗುವವರು ಗೇಟ್‌ನಲ್ಲಿಯೇ ಇಳಿದುಕೊಳ್ಳಿ. ಮುಕ್ತಾಪುರಕ್ಕೆ ಹೋಗುವವರು ಕೊಡರ್ಮಾದಲ್ಲಿ ಇಳಿಯಬೇಕಾಗುತ್ತದೆ. ಕೊಡರ್ಮಾದಲ್ಲಿ ರೈಲು ಹದಿನೈದು ನಿಮಿಷ ನಿಲ್ಲುತ್ತದೆ. ಕಾಫೀ ಟೀ ಕುಡಿದುಕೊಳ್ಳಬಹುದು. ಜೆಹೆನಾಬಾದ್‌ನಲ್ಲಿಯೂ ರೈಲು ಸ್ವಲ್ಪ ಹೊತ್ತು ನಿಲ್ಲುತ್ತದೆ...''

ಆ ವ್ಯಕ್ತಿಯ ವಾಕ್ಚಾತುರ್ಯ ಹಾಗೂ ನೆನಪಿನ ಶಕ್ತಿಯನ್ನು ನೋಡಿ ನಾನು ಆಶ್ಚರ್ಯಚಕಿತನಾದೆ. ಇಂತಹವರನ್ನು ನಾನು 'ಟೊಮಾಟೊ ಮಾದರಿ'ಯ ವ್ಯಕ್ತಿ ಎಂದು ಕರೆಯುತ್ತೇನೆ. ಏಕೆಂದರೆ ಇದು ಆಲೂಗಡ್ಡೆ, ಬಟಾಣಿ, ಬೀನ್ಸ್ ಮುಂತಾದ ಯಾವುದರ ಜೊತೆಯಲ್ಲಿಯಾದರೂ ಅಡುಗೆಯಲ್ಲಿ ಬಳಸಬಹುದು. ಬಣ್ಣ ಮತ್ತು ಸ್ವಾದ ಇದರದ್ದೇ ಉಳಿದುಕೊಳ್ಳುತ್ತದೆ. ಅಂದರೆ ಟೊಮಾಟೊ ಎಲ್ಲದರೊಂದಿಗೂ ಸುಲಭವಾಗಿ ಬೆರೆಯುತ್ತದೆ.

ಆತನ 'ಸೂಚನಾ ಪ್ರಕಟಣೆ'ಯ ಕಾರ್ಯ ಮುಗಿಯುತ್ತಿದ್ದಂತೆಯೇ ಆತನಿಗೆ ಮತ್ತೆ ಅಮರ್ ಸಿಂಗ್ ಮತ್ತು ಅವರು ಬರೆದಿರುವ 'ಕಾಬೂಲಿ'ಯ ನೆನಪಾಗುತ್ತದೆ ಎನ್ನುವುದು ನನಗೆ ಚೆನ್ನಾಗಿ ತಿಳಿದಿತ್ತು.

ಮುಂದಿನ ನಿಲ್ದಾಣ ಬರುತ್ತಿದ್ದಂತೆಯೇ ಆತ ಕಿಟಕಿಯ ಹೊರಗೆ ತಲೆಯನ್ನು ತೂರಿಸಿ ಅತ್ತಿತ್ತ ನೋಡಿದ. ಯಾವುದೋ ಒಬ್ಬ ವ್ಯಕ್ತಿಗಾಗಿ ಆತ ಹುಡುಕುತ್ತಿರುವುದು ನನಗೆ ಸ್ಪಷ್ಟವಾಯಿತು. ರೈಲು ಮತ್ತೆ ಚಲಿಸಲು ಆರಂಭವಾಗುತ್ತಿದ್ದಂತೆಯೇ ಆತ ಕುತ್ತಿಗೆಯನ್ನು ಕಿಟಕಿಯಿಂದ ಒಳಕ್ಕೆ ತೆಗೆದುಕೊಂಡು ಹೇಳಿದ, ''ಆತನಿಗೆ ಅದೃಷ್ಟವಿಲ್ಲ ಎನ್ನಿಸುತ್ತದೆ. ಒಂದು ವೇಳೆ ಆತ ಸಿಕ್ಕಿದ್ದರೆ ಆತನಿಗೆ ನಿಮ್ಮನ್ನು ಪರಿಚಯ ಮಾಡಿಸೋಣ ಅಂದುಕೊಂಡಿದ್ದೆ. ಇರಲಿ ಬಿಡಿ...''

ಈಗ ಆತ ಸೀಟಿನ ಮೇಲೆ 'ಅರ್ಧಾಸನ'ದಲ್ಲಿ, ಅಂದರೆ ಒಂದು ಕಾಲನ್ನು ಸೀಟಿನ ಮೇಲೆ ಹಾಕಿಕೊಂಡು, ಇನ್ನೊಂದನ್ನು ಇಳಿಬಿಟ್ಟು ಕುಳಿತುಕೊಂಡ. ನಂತರ ಧೋತಿಯನ್ನು ಮೊಣಕಾಲಿನವರೆಗೆ ಸರಿಸಿಕೊಂಡು, ಬೆರಳುಗಳನ್ನು ತೊಡೆಯ ಮೇಲೆ 'ಸಿತಾರನ್ನು ನುಡಿಸುವ ರೀತಿಯಲ್ಲಿ' ಆಡಿಸತೊಡಗಿದ. ಆತನ ಈ 'ಕರೆತ'ವನ್ನು ನೋಡಿ ಎದುರು ಆಸನದಲ್ಲಿ ಕುಳಿತಿದ್ದ ಬಂಗಾಳಿ ಹೆಂಗಸು ತನ್ನ ಮಗಳಿಗೆ ಏನೋ ಹೇಳುತ್ತ ಮುಖವನ್ನು ತಿರುಗಿಸಿಕೊಂಡಳು. ಆಕೆಯ ಪತಿಮಹಾಶಯ ಬಂಗಾಳಿಯಲ್ಲಿ ಏನನ್ನೋ ಗೊಣಗುತ್ತ ಮುಖವನ್ನು ಸಿಂಡರಿಸಿದ. ಮೇಲಿನ ಬರ್ತ್‌ನಲ್ಲಿ ಕುಳಿತಿದ್ದ ಮಹಾನುಭಾವನು ಸಿಗರೇಟನ್ನು ಹಚ್ಚಿಕೊಳ್ಳುತ್ತ ಉದ್ಗರಿಸಿದ, 'ಟೆರ್ರಿಬಲ್!'

ಇದೇ ಸಮಯದಲ್ಲಿ ನನ್ನ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿಯು ಮೌಲ್ವಿ ಸಾಹೇಬರನ್ನು ಪ್ರಶ್ನಿಸಿದ, ''ನಿಮಗೆ ಇವರ ಪರಿಚಯವಿಲ್ಲವೇನು?''

'ಇವರ ಪರಿಚಯವಾ?' ಎನ್ನುವಂತೆ ಅವರು ನನ್ನ